ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಹರಿಹರ
ಸಿಸಿ 27/2016

ಪಿ ಡಬ್ಲ್ಯೂ-27
ಸಿ ಡಬ್ಲ್ಯೂ-31

ಸಾಕ್ಷಿಯ ಹೆಸರುಃ ಯಲ್ಲಪ್ಪ

ತಂದೆಯ ಹೆಸರುಃ ಹನುಮಂತಪ್ಪ

ವಯಸ್ಸುಃ 88

ಉದ್ಯೋಗಃ ವ್ಯವಸಾಯ

ವಾಸಸ್ಥಳಃ ಸಾರಥಿ

ಸಾಕ್ಷಿಯನ್ನು ದಿನಾಂಕ ಃ 07.01.2020 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಸ ಸ ಅ ರವರಿಂದಃ

ಆರೋಪಿ ಪರಿಚಯ ಇರುತ್ತಾನೆ. ಸುಮಾರು 10 ವರ್ಷದ ಹಿಂದೆ ನಾನು ಭತ್ತ ಬೆಳೆದಿದ್ದೆ. ಸದರಿ ಭತ್ತವನ್ನು ಆರೋಪಿಗೆ ಮಾರಾಟ ಮಾಡಿದ್ದೆ. ಕ್ವಿಂಟಲ್ ಗೆ 1100-00 ರೂಗಳಂತೆ 49 ಚೀಲ ಮಾರಾಟ ಮಾಡಿದ್ದೆ. ಆರೋಪಿ 20 ದಿನ ಬಿಟ್ಟು ಹಣ ಕೊಡುತ್ತೇನೆ ಎಂದು ಹೇಳಿದ್ದ. ನಾನು ಸದರಿ ಭತ್ತವನ್ನು ತೂಕ ಮಾಡಿ ಕೊಟ್ಟಿರುತ್ತೇನೆ. ಆರೋಪಿ ಇದುವರೆಗೆ ನನಗೆ ಹಣ ಕೊಟ್ಟಿಲ್ಲ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ** ವಕೀಲರಾದ ಶ್ರೀ ಆರ್.ಪಿ **ವಕೀಲರಿಂದಃ**

ಭತ್ತ ಮಾರಾಟ ಮಾಡಿರುವ ಕುರಿತು ಬಿಲ್ಲನ್ನು ಪಡೆದುಕೊಂಡಿಲ್ಲ. ಆರೋಪಿಗೆ ನಾನು ಭತ್ತ ಮಾರಾಟ ಮಾಡಿರುವ ಕುರಿತು ದಾಖಲೆಯನ್ನು ಪಡೆದು ಪೋಲಿಸರಿಗೆ ಕೊಟ್ಟಿಲ್ಲ. ಆರೋಪಿ ನನಗೆ ಹಣ ಕೊಡಬೇಕು ಎಂದು ನ್ಯಾಯಾಲಯದಲ್ಲಿ ನಾನು ಕೇಸನ್ನು ಸಲ್ಲಿಸಿಲ್ಲ. ಆರೋಪಿ ನಂದಿತಾವರೆ ಗ್ರಾಮದಲ್ಲಿರುತ್ತಾನೆ ಎನ್ನುವುದು ನಿಜ. ಆರೋಪಿಗೆ ನಂದಿತಾವರೆ ಗ್ರಾಮದಲ್ಲಿ ಜಮೀನು ಮನೆ ಇರುತ್ತದೆ. ಆರೋಪಿಗೆ ನಾನು ಯಾವುದೇ ರೀತಿಯ ಭತ್ತ ಮಾರಾಟ ಮಾಡಿಲ್ಲ ಚಾಸಾ 28 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು , ಚಾಸಾ 29 ರಿಂದ 30 ಹಾಗೂ ಚಾಸಾ 28 ಒಂದೇ ಕುಲಸ್ತರಿರುವುದರಿಂದ ಚಾಸಾ 28 ಹೇಳಿದಂತೆ ಕೇಳುತ್ತೇವೆ ಎನ್ನುವುದು ನಿಜ. ಆರೋಪಿಗೆ ನಾನು ಯಾವುದೇ ಭತ್ತ ಮಾರಾಟ ಮಾಡದೇ ಇದ್ದರೂ ಸಹ ಚಾಸಾ 28 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿಲ್ಲ.

ಪಿ ಡಬ್ಲ್ಯೂ-27

ಸಿ ಡಬ್ಲ್ಯೂ-31

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹರಿಹರ